ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಕಚೇರಿ ನಡವಳಿಗಳು

ವಿಷಯ: ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದ ಖಾಸಗಿ ಅನುದಾನಿತ ಚಿತ್ರಕಲಾಶಾಲೆ /ಮಹಾವಿದ್ಯಾಲಯಗಳಿಗೆ 2017-18 ನೇ ಸಾಲಿನ ಫೆಬ್ರವರಿ 2018ರ ಮಾಹೆಯ ಸಹಾಯನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: (1) ಸರ್ಕಾರಿ ಆದೇಶ ಸಂಖ್ಯೆ: ಇಡಿ 9 ಎಂಪಿಎಸ್ 90 ದಿ:27-3-1991
(2) ಸರ್ಕಾರಿ ಆದೇಶ ಸಂಖ್ಯೆ: ಇಡಿ 36 ಎಂಪಿಎಸ್ 2009, ದಿ: 22.06.2009
(3) ಸರ್ಕಾರದ ಆದೇಶ ಇಡಿ 41 ಯುಆರ್‌ಸಿ 2014 ದಿ:10-7-2017
(4) ಆಯುಕ್ತರು,ಕಾಲೇಜು ಶಿಕ್ಷಣ ಇಲಾಖೆ ಇವರ ಟಿಪ್ಪಣಿ ಕಾಶಿಆ/1/ಆಆಶ/17-18 ದಿ:22-9-2017
(5) ಆಯುಕ್ತರು,ಕಾಲೇಜು ಶಿಕ್ಷಣ ಇಲಾಖೆ ಇವರ ಟಿಪ್ಪಣಿ ಕಾಶಿಆ/1/ವೇಟಿಇತರೆ/ಚಿಕ ಶಾಲೆ/17-18/ಚಿವಿ ದಿ:5-12-2017

ಪ್ರಸ್ತಾವನೆ:

ಉಲ್ಲೇಖ (1) ಮತ್ತು (2) ರ ಸರ್ಕಾರಿ ಆದೇಶಗಳಲ್ಲಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಟ್ಟಿದ್ದ ರಾಜ್ಯದ ಎಲ್ಲಾ ಕಲಾಶಾಲೆ/ ಮಹಾವಿದ್ಯಾಲಯಗಳ ಆಯವ್ಯಯ ನಿರ್ವಹಣೆ ಹಾಗೂ ಸಿಬ್ಬಂದಿ ವರ್ಗದವರ ಸೇವಾ ನಿರ್ವಹಣೆಯನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡಿಸಲಾಗಿದೆ. ಉಲ್ಲೇಖ (1)ರ ಆದೇಶದ ಸೂಚನೆಯಂತೆ ತಾಂತ್ರಿಕ ಶಿಕ್ಷಣ ಇಲಾಖೆಯ 2010-2011 ನೇ ಸಾಲಿನಿಂದ ಯೋಜನೇತರ ಲೆಕ್ಕ ಶೀರ್ಷಿಕೆ [2203-ತಾಂತ್ರಿಕ ಶಿಕ್ಷಣ, 104-ಸರ್ಕಾರೇತರ ತಾಂತ್ರಿಕ ಕಾಲೇಜು ಮತ್ತು ಸಂಸ್ಥೆಗಳಿಗೆ ಸಹಾಯ,09-ಲಲಿತಕಲಾ ಮಹಾವಿದ್ಯಾಲಯಗಳು,101- ಸಹಾಯಾನುದಾನ (2203-00-104-09-101) ಅಡಿಯಲ್ಲಿ ಅನುದಾನಿತ ಕಲಾಶಾಲೆ/ ಮಹಾವಿದ್ಯಾಲಯಗಳ ಸಹಾಯನುದಾನಕ್ಕೆ ಸಂಬಂಧಿಸಿದಂತೆ ಆಯವ್ಯಯವನ್ನು ಒದಗಿಸಿಕೊಳ್ಳಲಾಗಿದೆ.

ಉಲ್ಲೇಖ(3) ಸರ್ಕಾರದ ಆದೇಶ ಇಡಿ 41 ಯುಆರ್‌ಸಿ 2014 ದಿ:10-7-2017 ರಲ್ಲಿ ಅನುದಾನಿತ ಚಿತ್ರಕಲಾ ಶಾಲೆಗಳ ಆಡಳಿತ ಮತ್ತು ಆರ್ಥಿಕ ನಿರ್ವಹಣೆಯನ್ನು ಕಾಲೇಜು ಶಿಕ್ಷಣ ಇಲಾಖೆಗೆ ವರ್ಗಾಯಿಸಿ ಆದೇಶಿಸಲಾಗಿದೆ.

ಉಲ್ಲೇಖ(4) ರಲ್ಲಿ ಆಯುಕ್ತರು,ಕಾಲೇಜು ಶಿಕ್ಷಣ ಇಲಾಖೆ ತಮ್ಮ ಟಿಪ್ಪಣಿಯಲ್ಲಿ ಚಿತ್ರಕಲಾ ಶಾಲೆಗಳ ಕಡತಗಳನ್ನು ವಹಿಸಿಕೊಳ್ಳದೇ ಇರುವುದರಿಂದ ಜುಲೈ,ಆಗಸ್ಟ್ ಮತು ಸೆಪ್ಟೆಂಬರ್ 2017ರ ಮಾಹೇಗಳಿಗೆ ಸಹಾಯನುದಾನವನ್ನು ತಾಂತ್ರಿಕ ಶಿಕ್ಷಣ ಇಲಾಖೆ ಯಿಂದಲೇ ಬಿಡುಗಡೆ ಮಾಡಲು ಕೋರಿದ್ದು, ಅದರಂತೆ ಈ ಕಛೇರಿಯ ಆದೇಶ ಡಿಟಿಇ 42 ಜಿಆರ್‌ಟಿ(2) 17 ದಿ:13-10-17 ರಲ್ಲಿ 23 ಚಿತ್ರಕಲಾಶಾಲೆಗಳಿಗೆ ಸಹಾಯನುದಾನ ಬಿಡುಗಡೆ ಮಾಡಲಾಗಿದೆ.

ಮುಂದುವರೆದು ಆಯುಕ್ತರು,ಕಾಲೇಜು ಶಿಕ್ಷಣ ಇಲಾಖೆ, ಉಲ್ಲೇಖ(5) ರ ತಮ್ಮ ಟಿಪ್ಪಣಿಯಲ್ಲಿ ಆರ್ಥಿಕ ವರ್ಷದ ಉಳಿದ ಅವಧಿಗೆ ತಾಂತ್ರಕ ಶಿಕ್ಷಣ ಇಲಾಖೆಯಿಂದಲೇ ಸಹಾಯನುದಾನ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ಆದುದರಿಂದ, ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ಕಾಣಿಸಿರುವ ಚಿತ್ರಕಲಾ ಶಾಲೆ/ ಮಹಾವಿದ್ಯಾಲಯಗಳ ಸಹಾಯನುದಾನವನ್ನು ಆಯಾ ಸಂಸ್ಥೆಗಳ ಪ್ರಾಂಶುಪಾಲರುಗಳು ಫೆಬ್ರವರಿ 2018ರ ಮಾಹೆಗೆ ಸಲ್ಲಿಸಿರುವ ಕ್ಲೇಮ್ಗುಗಳನ್ನು ಸ್ಥೂಲವಾಗಿ ಪರಿಶೀಲಿಸಿ, ಕೂಲಂಕಷ ಲೆಕ್ಕ ತಪಾಸಣೆಯ ನಿಬಂಧನೆಯ

ಮೇರೆಗೆ ಒಟ್ಟು ಮೊತ್ತ **ರೂ.5821416/-(ರುಪಾಯಿ ಐವತ್ತೆಂಟು ಲಕ್ಷದ ಇಪ್ಪತ್ತೊಂದು ಸಾವಿರದ ನಾಲ್ಕು ನೂರಾ ಹದಿನಾರು ಮಾತ್ರ)**ಗಳ ಸಹಾಯನುದಾನವನ್ನು ಬಿಡುಗಡೆಗೊಳಿಸಲು ನಿರ್ಧರಿಸಲಾಗಿದೆ. ಆದುದರಿಂದ ಈ ಕೆಳಕಂಡ ಆದೇಶ.

## ಆದೇಶ

**ಸಂಖ್ಯೆ: ಡಿಟಿಇ 56 ಜಿಆರ್‌ಟಿ(2) 2017 ಬೆಂಗಳೂರು, ದಿನಾಂಕ: 6-3-18**

ಆಯುಕ್ತರು,ಕಾಲೇಜು ಶಿಕ್ಷಣ ಇಲಾಖೆ ಇವರ ಟಿಪ್ಪಣಿ ದಿ:5-12-2017 ರಲ್ಲಿ ಚಿತ್ರಕಲಾ ಶಾಲೆಗಳಿಗೆ ಆರ್ಥಿಕ ವರ್ಷದ ಉಳಿದ ಅವಧಿಗೆ ತಾಂತ್ರಿಕ ಶಿಕ್ಷಣ ಇಲಾಖೆಯಿಂದಲೇ ಸಹಾಯನುದಾನ ಬಿಡುಗಡೆಮಾಡಬೇಕೆಂದು ಕೋರಿರುವ ಹಿನ್ನಲೆಯಲ್ಲಿ ಈ ಕೆಳಕಂಡ ಖಾಸಗಿ ಅನುದಾನಿತ ಚಿತ್ರಕಲಾಶಾಲೆ / ಮಹಾವಿದ್ಯಾಲಯಗಳ ಬೋಧಕ/ ಬೋಧಕೇತರ ಸಿಬ್ಬಂದಿಯವರಿಗೆ 2017-18 ನೇ ಸಾಲಿನ ಫೆಬ್ರವರಿ 2018ರ ಮಾಹೆಗೆ ಸಹಾಯನುದಾನವನ್ನು ವಿತರಿಸಲು ಅನುಕೂಲವಾಗುವಂತೆ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಡಿಸಿ, ಸಂಬಂಧಪಟ್ಟ ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ಅನುಬಂಧದ ಕಾಲಂ(4)ರಲ್ಲಿ ಕಾಣಿಸಿರುವಂತೆ ಪ್ರತೀ ಸಂಸ್ಥೆಗೆ ಪ್ರತ್ಯೇಕವಾಗಿ ಅನ್ವಯಿಸುವಂತೆ ಒಟ್ಟಾರೆ ಸಹಾಯನುದಾನ **ಒಟ್ಟು ರೂ.5821416/-(ರುಪಾಯಿ ಐವತ್ತೆಂಟು ಲಕ್ಷದ ಇಪ್ಪತ್ತೊಂದು ಸಾವಿರದ ನಾಲ್ಕು ನೂರಾ ಹದಿನಾರು ಮಾತ್ರ)**ಗಳನ್ನು ಈ ಮೂಲಕ ಬಿಡುಗಡೆ ಮಾಡಲಾಗಿದೆ ಹಾಗೂ ಈ ಮೊತ್ತವನ್ನು ಸಿ.ಟಿ.ಎಸ್.8ರಲ್ಲಿ ಡ್ರಾ ಮಾಡಿ ವಿತರಿಸಲು ಆದೇಶಿಸಲಾಗಿದೆ.

## ಅನುಬಂಧ

| ಕ್ರ ಸಂ | ಸಂಸ್ಥೆಯ ಹೆಸರು | ಫೆಬ್ರವರಿ 2018 ರ ಮಾಹೆಗೆ ಪ್ರಿನ್ಸಿಪಾಲರು ಕ್ಲೇಮು ಮಾಡಿರುವ ಸಹಾಯನುದಾನ ಮೊತ್ತ (ರೂ.ಗಳಲ್ಲಿ) | ಫೆಬ್ರವರಿ 2018 ರ ಮಾಹೆಗೆ ಬಿಡುಗಡೆ ಮಾಡಲಾಗಿರುವ ಸಹಾಯನುದಾನ ಒಟ್ಟು ಮೊತ್ತ (ರೂ.ಗಳಲ್ಲಿ) |
|---|---|---|---|
| 1 | 2 | 3 | 4 |
| 1 | ಕೆನ್ ಕಲಾ ಶಾಲೆ, ಬೆಂಗಳೂರು | 265624-00 | 265624-00 |
| 2 | ಕಲಾ ಮಂದಿರ ಕಲಾಶಾಲೆ, ಬೆಂಗಳೂರು | 142276-00 | 142276-00 |
| 3 | ರವೀಂದ್ರ ಕಲಾ ನಿಕೇತನ, ತುಮಕೂರು | 409939-00 | 409939-00 |
| 4 | ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್,ಮೈಸೂರು | 229298-00 | 229298-00 |
| 5 | ಮಹಾಲಸ ಚಿತ್ರಕಲಾ ಶಾಲೆ, ಮಂಗಳೂರು | 308984-00 | 308984-00 |
| 6 | ನಿರ್ಮಲಾ ಚಿತ್ರಕಲಾ ಶಾಲೆ, ಹಾಸನ | 204703-00 | 204703-00 |

| | | | |
|---|---|---|---|
| 7 | ಬೆನಾನ್ ಸ್ಮಿತ್ ಕಾಲೇಜ್ ಆಫ್ ಫೈನ್ ಅರ್ಟ್ಸ್, ಬೆಳಗಾವಿ | 65098-00 | 65098-00 |
| 8 | ಆದರ್ಶ ಚಿತ್ರಕಲಾ ಮಹಾವಿದ್ಯಾಲಯ, ಇಂಡಿ, ವಿಜಯಪುರ | 104612-00 | 104612-00 |
| 9 | ಶ್ರೀ ಸಿದ್ದೇಶ್ವರ ಕಲಾ ಮಂದಿರ, ವಿಜಯಪುರ | 82760-00 | 82760-00 |
| 10 | ಶ್ರೀ ವಿವೇಕಾನಂದ ಕಲಾಮಂದಿರ, ರಾಯಬಾಗ | 344640-00 | 344640-00 |
| 11 | ಶ್ರೀ ಮುರುಘೇಂದ್ರ ಲಲಿತ ಕಲಾ ಮಂದಿರ, ಅಥಣಿ | 197841-00 | 197841-00 |
| 12 | ಕರ್ನಾಟಕ ಲಲಿತಕಲಾ ಮಹಾವದ್ಯಾಲಯ, ಗೋಕಾಕ್ | 343640-00 | 343640-00 |
| 13 | ಮಹೇಶ ಚಿತ್ರಕಲಾ ಮಹಾವಿದ್ಯಾಲಯ, ಜಮಖಂಡಿ. | 299379-00 | 299379-00 |
| 14 | ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯ, ಗದಗ | 481204-00 | 481204-00 |
| 15 | ಭಾರತೀಯ ಕಲಾ ಕೇಂದ್ರ , ಧಾರವಾಡ | 370150-00 | 370150-00 |
| 16 | ಜೆ.ಎಸ್.ಎಸ್.ಹಾಲಭಾವಿ ಸ್ಕೂಲ್ ಆಫ್ ಆರ್ಟ್, ಧಾರವಾಡ | 303154-00 | 303154-00 |
| 17 | ಶ್ರೀ ವಿಜಯ ಮಹಾಂತೇಶ್ ಲಲಿತ ಕಲಾ ಮಹಾವಿದ್ಯಾಲಯ, ಹುಬ್ಬಳ್ಳಿ. | 491846-00 | 491846-00 |
| 18 | ಯೋಗೀಶ್ ಚಿತ್ರಕಲಾ ಮಹಾವಿದ್ಯಾಲಯ, ಬೀದರ್ | 252018-00 | 252018-00 |
| 19 | ಚಿತ್ರಕಲಾ ಮಹಾವಿದ್ಯಾಲಯ, ಹೂವಿನಹಿಪ್ಪರಗಿ | 279274-00 | 279274-00 |
| 20 | ವಿಜಯ ಆರ್ಟ್ ಇನ್ಸ್ಟುಟ್, ಗದಗ | 290910-00 | 290910-00 |
| 21 | ವಾಣಿ ಚಿತ್ರಕಲಾ ಶಾಲೆ, ಚಿಕ್ಕನಾಯಕನಹಳ್ಳಿ. | 60548-00 | 60548-00 |
| 22 | ದಿ ಐಡಿಯಲ್ ಫೈನ್ ಆರ್ಟ್ ಇನ್ಸಟ್ಯೂಟ್, ಕಲಬುರ್ಗಿ | 264310-00 | 264310-00 |
| 23 | ಟಾಗೋರ ಚಿತ್ರಕಲಾ ಮಹಾವಿದ್ಯಾಲಯ, ಕಾರವಾರ | 29208-00 | 29208-00 |
| | **ಒಟ್ಟು** | **5821416-00** | **5821416-00** |

**ಒಟ್ಟು ರೂ.5821416/-(ರುಪಾಯಿ ಐವತ್ತೆಂಟು ಲಕ್ಷದ ಇಪ್ಪತ್ತೊಂದು ಸಾವಿರದ ನಾಲ್ಕು ನೂರಾ ಹದಿನಾರು ಮಾತ್ರ)**

**ಷರತ್ತು ಮತ್ತು ನಿಬಂಧನೆಗಳು:**

[1] ಮೇಲ್ಕಂಡ ಮುಂಗಡ ವೇತನಾನುದಾನ ಬಿಡುಗಡೆಯು ತಾಂತ್ರಿಕ ಶಿಕ್ಷಣ ಇಲಾಖೆ/ಕಾಲೇಜು ಶಿಕ್ಷಣ ಇಲಾಖೆಯ ಕೂಲಂಕಷ ಲೆಕ್ಕ ತಪಾಸಣೆಗೆ ಒಳಪಟ್ಟಿರುತ್ತದೆ.

[2] ಹೆಚ್ಚಿನ ಅನುದಾನವು ಕ್ಲೇಮು ಮಾಡಿರುವುದು ಮತ್ತು ಬಿಡುಗಡೆಯಾಗಿರುವುದು ಕಂಡುಬಂದಲ್ಲಿ,ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ನಿರ್ಧರಿಸುವ ರೀತಿಯಲ್ಲಿ ವಸೂಲಾತಿಗೆ ಕ್ರಮ ತೆಗೆದುಕೊಳ್ಳಲಾಗುವುದು.

[3] ಪ್ರಿನ್ಸಿಪಾಲರು ಸಿಬ್ಬಂದಿ ವರ್ಗದವರಿಗೆ ಸಹಾಯನುದಾನವನ್ನು ವಿತರಿಸುವ ಮುನ್ನ ಸಾರ್ವಜನಿಕ ಶಿಕ್ಷಣ ಇಲಾಖೆಯು ವಿಧಿಸಿರುವ ಎಲ್ಲಾ ನಿಬಂಧನೆಗಳನ್ನು ಪೂರೈಸಿರುವ ಬಗ್ಗೆ ಖಚಿತ ಪಡಿಸಿಕೊಳ್ಳತಕ್ಕದ್ದು.

[4] ಮೇಲ್ಕಂಡ ಅನುದಾನಿತ ಚಿತ್ರಕಲಾ ಮಹಾವಿದ್ಯಾಲಯಗಳ ಪೈಕಿ ನಿರ್ವಹಣ ಅನುದಾನ ಪಡೆಯದೇ ಇರುವ ಸಂಸ್ಥೆಗಳು 2016-17 ನೇ ಸಾಲಿನಲ್ಲಿ ಸಂಗ್ರಹಿಸಿರುವ ಬೋಧನ ಶುಲ್ಕದ ಶೇ.50 ರಷ್ಟನ್ನು ಖಜಾನೆಗೆ ಪಾವತಿಸಿರುವ ಚಲನ್ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ.

[5] ಈ ಆದೇಶದಲ್ಲಿ ಬಿಡುಗಡೆಗೊಂಡಿರುವ ಅನುದಾನದ ವೆಚ್ಚವನ್ನು "2203-ತಾಂತ್ರಿಕ ಶಿಕ್ಷಣ – 00-104-ಸರ್ಕಾರೇತರ ತಾಂತ್ರಿಕ ಕಾಲೇಜು ಮತ್ತು ಸಂಸ್ಥೆಗಳಿಗೆ ಸಹಾಯ-0-09-ಲಲಿತಕಲಾ ಮಹಾವಿದ್ಯಾಲಯಗಳು [2203-00-104-0-09] ಲೆಕ್ಕಶೀರ್ಷಿಕೆಯಡಿ 2017-2018 ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯದಲ್ಲಿ ಭರಿಸತಕ್ಕದ್ದು.

[6] ಪ್ರಪತ್ರ ಕ.ಆ.ಸಂ.-3 ಅನುಚ್ಛೇದ-24ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅನುದಾನದ ಬಿಲ್ಲನ್ನು ತಯಾರಿಸಿ ಸಲ್ಲಿಸತಕ್ಕದ್ದು.

[7] 2016-17 ನೇ ಸಾಲಿನಲ್ಲಿ ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನದ ಬಗ್ಗೆ ಬಳಕೆ ಪ್ರಮಾಣಪತ್ರ' ಹಾಗೂ 'ಸಿಎ' ದೃಢೀಕೃತ ಲೆಕ್ಕಪರಿಶೋಧನಾ ವರದಿಯನ್ನು ಕ.ಆ.ಸಂಹಿತೆ ಅನುಚ್ಛೇದ 161ರ ಅನ್ವಯ ಇಲಾಖೆಗೆ ಸಲ್ಲಿಸತಕ್ಕದ್ದು.

ನಿರ್ದೇಶಕರು.

ಇವರಿಗೆ ಸೂಕ್ತ ಕ್ರಮಕ್ಕಾಗಿ,

1) ಪ್ರಾಚಾರ್ಯರುಗಳಿಗೆ ಅನುಬಂಧದಲ್ಲಿಯ ಚಿತ್ರಕಲಾಶಾಲೆ/ ಮಹಾವಿದ್ಯಾಲಯಗಳಿಗೆ.
2) ನಿರ್ದೇಶನಾಲಯದ ಬಿಎಲ್ಎಸ್[3]
3) ನಿರ್ದೇಶನಾಲಯದ ನಗದು ಶಾಖೆ

ಪ್ರತಿ ಮಾಹಿತಿಗಾಗಿ:

[1] ಮಹಾಲೇಖಪಾಲರು[ಎ&ಇ], ಕರ್ನಾಟಕ, ಬೆಂಗಳೂರು.
[2] ಸ್ಪೆಷಲ್ ಸೆಲ್, ಮಹಾಲೇಖಪಾಲರ ಕಚೇರಿ, ಕರ್ನಾಟಕ, ಬೆಂಗಳೂರು.
[3] ಲೆಕ್ಕಾಧಿಕಾರಿಗಳು[ಟಿಬಿಎಸ್], ನಿರ್ದೇಶನಾಲಯ, ಬೆಂಗಳೂರು.
[4] ಲೆಕ್ಕಾಧಿಕಾರಿಗಳು[ಬಿಲ್ಸ್], ನಿರ್ದೇಶನಾಲಯ, ಬೆಂಗಳೂರು.
[5] ಆಡಳಿತಾಧಿಕಾರಿಗಳು, ನಿರ್ದೇಶನಾಲಯ, ಬೆಂಗಳೂರು.
[6] ನಿರ್ದೇಶನಾಲಯದ ಆರ್ಇಸಿ[2], ಐಎನ್ಎಸ್
[7] ಮತ್ತು [8] ಹೆಚ್ಚುವರಿ ಪ್ರತಿ [9] ಕಛೇರಿ ಪ್ರತಿ.